## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಯು.ಬಿ ವೆಂಕಟೇಶ್ ಇವರು ನಿಯಮ 72ರಡಿ ಮಂಡಿಸಿರುವ ಸೂಚನೆಗೆ ಹೇಳಿಕೆ

**ವಿಷಯ: ರಾಜ್ಯದಲ್ಲಿ 545 ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಪಿ.ಎಸ್.ಐ) (ಸಿವಿಲ್) ಗಳ ನೇಮಕಾತಿಯಲ್ಲಿ ನಡೆದಿರುವ ಅವ್ಯವಹಾರ (ಪರೀಕ್ಷಾ ಕೇಂದ್ರದ ಅನುಮತಿ, ಹಾಲ್ ಟಿಕೆಟ್‌ಗಳ ನಿಗಧಿಪಡಿಸುವುದು, ಪರೀಕ್ಷಾ ಕೇಂದ್ರದಲ್ಲಿ ಗೋಲ್ ಮಾಲ್, ಬ್ಲೂಟೂತ್‌ಗಳ ಬಳಕೆ, ಖಾಲಿ ಓ.ಎಂ.ಆರ್. ಶೀಟ್‌ಗಳ ಸ್ವೀಕೃತಿ, ಸರಿ ಉತ್ತರಗಳ ತಿದ್ದುಪಡಿ ಹೀಗೆ ಹಲವಾರು ಗೊಂದಲ ಮತ್ತು ಅವ್ಯವಹಾರಗಳ ಮೂಲಕ ಪರೀಕ್ಷೆಯನ್ನು ನಡೆಸಿ, ಲಂಚಗುಳಿತನದ) ಮೂಲಕ ಅಕ್ರಮ ನೇಮಕಾತಿ ಪ್ರಕ್ರಿಯೆಯ ಬಗ್ಗೆ ನಿಯಮ 72ರಡಿಯಲ್ಲಿ ಮಾನ್ಯ ಗೃಹ ಸಚಿವರನ್ನು ಗಮನ ಸೆಳೆಯ ಬಯಸುತ್ತೇನೆ.**

## ಸರ್ಕಾರದ ಉತ್ತರ

ಪೊಲೀಸ್ ಸಬ್–ಇನ್ಸ್‌ಪೆಕ್ಟರ್ (ಪಿ.ಎಸ್.ಐ) (ಸಿವಿಲ್) 545 ಹುದ್ದೆಗಳಿಗೆ ದಿನಾಂಕ: 03.10.2021 ರಂದು ರಾಜ್ಯದ 07 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ. ಸದರಿ ಲಿಖಿತ ಪರೀಕ್ಷೆಗಳನ್ನು ನಡೆಸುವ ಪೂರ್ವದಲ್ಲಿ ಪರೀಕ್ಷೆಗಳನ್ನು ನಡೆಸುವ ಸಂಬಂಧ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆಗಳಿಗೆ ಅನುಗುಣವಾಗಿ ಶಾಲಾ/ಕಾಲೇಜುಗಳನ್ನು ಗುರುತಿಸಿ, ಮಾಹಿತಿ ನೀಡುವಂತೆ ಪರೀಕ್ಷೆ ನಡೆಸಬೇಕಾಗಿರುವ ಪೊಲೀಸ್ ಕಮೀಷನರೇಟ್ / ಜಿಲ್ಲಾ ಕೇಂದ್ರಗಳ ಘಟಕಾಧಿಕಾರಿಗಳಿಗೆ ನೇಮಕಾತಿ ಘಟಕದಿಂದ ಕೋರಲಾಗಿರುತ್ತದೆ. ಅದರಂತೆ ಘಟಕಾಧಿಕಾರಿಗಳು ಲಿಖಿತ ಪರೀಕ್ಷೆಗಳನ್ನು ನಡೆಸುವ ಸಂಬಂಧ ಶಾಲಾ / ಕಾಲೇಜುಗಳ ಮುಖ್ಯಸ್ಥರಿಂದ ಅನುಮತಿಯನ್ನು ಪಡೆದು ಸದರಿ ಶಾಲಾ / ಕಾಲೇಜುಗಳ ಮಾಹಿತಿಯನ್ನು ನೇಮಕಾತಿ ಕಛೇರಿಗೆ ಸಲ್ಲಿಸಿರುತ್ತಾರೆ. ಅದರಂತೆ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.

ಘಟಕಾಧಿಕಾರಿಗಳು ಸಲ್ಲಿಸಿರುವ ಶಾಲಾ / ಕಾಲೇಜುಗಳ ಮಾಹಿತಿಯನ್ನು ಆಧರಿಸಿ, ಅವಶ್ಯಕತೆ ಇರುವಷ್ಟು ಅಭ್ಯರ್ಥಿಗಳನ್ನು ಪರೀಕ್ಷಾ ಕೇಂದ್ರಗಳಿಗೆ ನಿಗದಿಪಡಿಸಿ, ಅದರಂತೆ ಅಭ್ಯರ್ಥಿಗಳಿಗೆ ಹಾಲ್ ಟಿಕೇಟ್‌ಗಳನ್ನು ಆನ್–ಲೈನ್ ಮೂಲಕ ಅಪ್‌ಲೋಡ್ ಮಾಡಲಾಗಿರುತ್ತದೆ.

545 ಪಿಎಸ್‌ಐ ರವರುಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯಿಂದ ದಿನಾಂಕ: 21.01.2021 ರಂದು ಅಧಿಸೂಚನೆಯನ್ನು ಹೊರಡಿಸಿ ದಿನಾಂಕ: 03.10.2021 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿತ್ತು. ದಿನಾಂಕ: 19.01.2022 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ದಿನಾಂಕ: 07.04.2022 ರಂದು ಸದರಿ ಲಿಖಿತ ಪರೀಕ್ಷೆಯಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ ದೂರುಗಳು ಸ್ವೀಕೃತಗೊಂಡ ಹಿನ್ನೆಲೆಯಲ್ಲಿ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಎಸಗಿದ ಅಕ್ರಮಗಳ ಕುರಿತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.

ದಿನಾಂಕ:08.04.2022 ರಂದು ಸಿಐಡಿಯು ಈ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸಿದ್ದು, ಮೇಲ್ನೋಟಕ್ಕೆ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಓ.ಎಂ.ಆರ್ ಅವ್ಯವಹಾರವನ್ನೆಸಗಿರುವುದು ಕಂಡುಬಂದಿದ್ದರ ಮೇರೆಗೆ ಸಿಐಡಿಯ ವಿಚಾರಣಾಧಿಕಾರಿಯವರು ದಿನಾಂಕ: 09.04.2022 ರಂದು ಕಲಬುರ್ಗಿ ನಗರ ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮೊಕದ್ದಮೆ ಸಂಖ್ಯೆ: 48/2022, ಕಲಂ 120(ಬಿ), 465, 468, 471, 420 ಮತ್ತು 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಕಲಬುರ್ಗಿ ನಗರದಲ್ಲಿ ನಡೆದ ಅವ್ಯವಹಾರಗಳು / ದಾಖಲಾದ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಸಫಲವಾದ ಅಭ್ಯರ್ಥಿಗಳ ಒಎಂಆರ್ ಹಾಳೆಗಳನ್ನು ತಜ್ಞರ ಪರೀಕ್ಷೆಗಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಹಂತ ಹಂತವಾಗಿ ಕಳುಹಿಸಲಾಗಿತ್ತು. ತಜ್ಞರ ಅಭಿಪ್ರಾಯ ವರದಿಗಳಿಂದ 22 ಸಫಲವಾದ ಅಭ್ಯರ್ಥಿಗಳು ಬೆಂಗಳೂರು ನಗರದಲ್ಲಿ ಅವ್ಯವಹಾರಗಳನ್ನು ನಡೆಸಿರುವುದು ಕಂಡುಬಂದಿರುತ್ತದೆ.

ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 60/2022, ಕಲಂ 465, 468, 471, 420, 120 (ಬಿ) ರೆ/ವಿ 34 ಐಪಿಸಿ ರಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ.

ಮೇಲ್ಕಂಡ ಪ್ರಕರಣಗಳ ತನಿಖಾ ಕಾಲದಲ್ಲಿ ಕಲಬುರಗಿ ಹಾಗೂ ಬೆಂಗಳೂರಿನಲ್ಲಿ ಇತರ ಅಭ್ಯರ್ಥಿಗಳು ಸಹಾ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗಿದ್ದಾರೆ ಎಂಬುದು ಕಂಡುಬಂದಿರುತ್ತದೆ. ಆದ ಕಾರಣ ಕಲಬುರಗಿಯಲ್ಲಿ ಬ್ಲೂಟೂತ್ ಬಳಕೆಗೆ ಸಂಬಂಧಿಸಿದಂತೆ 07 ಹೆಚ್ಚುವರಿ ಪ್ರಕರಣಗಳು ಹಾಗೂ ಬೆಂಗಳೂರಿನಲ್ಲಿ ಓ.ಎಂ.ಆರ್ ಶೀಟ್‌ಗಳ ತಿದ್ದುಪಡಿಗೆ ಸಂಬಂಧಿಸಿದಂತೆ 04 ಹೆಚ್ಚುವರಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಒಟ್ಟಾರೆ ಪಿ.ಎಸ್.ಐ ನೇಮಕಾತಿ ಪರೀಕ್ಷೆ-2021 ಕ್ಕೆ ಸಂಬಂಧಿಸಿದಂತೆ ಬ್ಲೂಟೂತ್ ಬಳಕೆ ಹಾಗೂ ಓ.ಎಂ.ಆರ್ ಸೀಟ್‌ಗಳ ತಿದ್ದುಪಡಿಗೆ ಸಂಬಂಧಿಸಿದಂತೆ 13 ಪ್ರಕರಣಗಳು ದಾಖಲಾಗಿ ಸಿಐಡಿ ತನಿಖೆ ನಡೆದಿರುತ್ತದೆ.

ಈ ಪ್ರಕರಣಗಳಲ್ಲಿ ಪರೀಕ್ಷಾ ಕೇಂದ್ರದಲ್ಲಿ ಓ.ಎಂ.ಆರ್ ಹಾಳೆಗಳ ತಿದ್ದುಪಡಿ, ನೇಮಕಾತಿ ವಿಭಾಗದಲ್ಲಿ ಓ.ಎಂ.ಆರ್ ಹಾಳೆಗಳ ತಿದ್ದುಪಡಿ ಮತ್ತು ಬ್ಲೂಟೂತ್ ಬಳಸಿ ಪರೀಕ್ಷೆ ಬರೆದಿರುವುದು ಈ ಮೂರು ರೀತಿಯ ಅಕ್ರಮಗಳು ನಡೆದಿರುವುದು ಕಂಡುಬಂದಿರುತ್ತದೆ.

ಈ ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈವರೆಗೂ ಈ ಕೆಳಗಿನಂತೆ ಕ್ರಮಜರುಗಿಸಲಾಗಿರುತ್ತದೆ.

- ನೇಮಕಾತಿ ವಿಭಾಗದಲ್ಲಿ ಓ.ಎಂ.ಆರ್ ಹಾಳೆಗಳನ್ನು ತಿದ್ದುವಲ್ಲಿ ಪಾತ್ರವಹಿಸಿದ್ದ ನೇಮಕಾತಿ ವಿಭಾಗದ ಅಂದಿನ ಎಡಿಜಿಪಿ ಅಮ್ರಿತ್ ಪಾಲ್ ರವರನ್ನು, ಡಿವೈಎಸ್‌ಪಿ ಶಾಂತಕುಮಾರ್ ಹಾಗೂ ಇತರ ಸಿಬ್ಬಂದಿಗಳನ್ನು ಬಂಧಿಸಲಾಗಿರುತ್ತದೆ.
- 08 ಪ್ರಕರಣಗಳಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಗಳನ್ನು ಸಲ್ಲಿಸಲಾಗಿದ್ದು, ತನಿಖೆಯನ್ನು ಮುಂದುವರೆಸಲಾಗಿರುತ್ತದೆ.
- ಒಟ್ಟಾರೆ ಈ ಪ್ರಕರಣದಲ್ಲಿ 95 ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿರುತ್ತದೆ.
- ಕಲಬುರಗಿ ಪ್ರಕರಣಗಳ ಆರೋಪಿಗಳಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳು ಹಾಗೂ ಮ್ಯೂಚುಯಲ್ ಫಂಡ್‌ಗಳಲ್ಲಿನ ರೂ.08 ಕೋಟಿಗೂ ಅಧಿಕ ಹಣವನ್ನು ಫ್ರೀಜ್ ಮಾಡಲಾಗಿದೆ ಹಾಗೂ 506 ಗ್ರಾಂ (ಸುಮಾರು ರೂ.20.16 ಲಕ್ಷ ಬೆಲೆಯ) ಚಿನ್ನದ ಆಭರಣಗಳನ್ನು ಬ್ಯಾಂಕ್‌ನ ಲಾಕರ್‌ನಿಂದ ವಶಪಡಿಸಿಕೊಳ್ಳಲಾಗಿದೆ.
- ನೇಮಕಾತಿ ವಿಭಾಗದ ಆರೋಪಿತರು ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ರೂ.3.11 ಕೋಟಿಗೂ ಅಧಿಕ ಹಣವನ್ನು ಹಲವಾರು ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ.
- ಪ್ರಕರಣದಲ್ಲಿ ಭಾಗಿಯಾದ ಸರ್ಕಾರಿ ನೌಕರರು ಮತ್ತು ಪೊಲೀಸ್ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಅಧಿಕಾರ ದುರುಪಯೋಗ, ತೀವ್ರತರವಾದ ಕರ್ತವ್ಯಲೋಪ, ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಆರೋಪಗಳಡಿ ಅಮಾನತ್ತುಪಡಿಸಲಾಗಿದ್ದು, ಸದರಿಯವರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ಸಿಐಡಿ ತನಿಖೆಯು ಪ್ರಗತಿಯಲ್ಲಿದ್ದು, ಪಿ.ಎಸ್.ಐ ನೇಮಕಾತಿಯ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ಆರೋಪಿತರುಗಳ ವಿರುದ್ಧ ಕಾನೂನು ರೀತ್ಯಾ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲಾಗುವುದು.

**ಒಇ 124 ಪಿಇಐ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

C-9

ನಿಯಮ-330, -ಕ್ರ.ಸಂ. 70
ನಿಯಮ-72, ಕ್ರ.ಸಂ. 09.

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ, ಶ್ರೀ ಎಸ್.ಎಲ್. ಭೋಜೇಗೌಡ, ಶ್ರೀ ಗೋವಿಂದರಾಜು ಹಾಗೂ ಶ್ರೀ ಸಿ.ಎನ್. ಮಂಜೇಗೌಡ ರವರುಗಳು ನಿಯಮ 330ರಡಿ ಮಂಡಿಸಿರುವ ಸೂಚನಾ ಪತ್ರದಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ.**

ವಿಷಯ: ರಾಜ್ಯದ ಪೊಲೀಸ್ ಇಲಾಖೆಯ ಕಾರ್ಯ ವೈಖರಿ, ದಕ್ಷತೆ ದೇಶಕ್ಕೆ ಮಾದರಿಯಾಗಿತ್ತು. ಬೇರೆ ಬೇರೆ ರಾಜ್ಯದವರು ಇಲ್ಲಿಗೆ ಬಂದು ಅಧ್ಯಯನ ಮಾಡಿ, ತಮ್ಮಲ್ಲಿ ಅಳವಡಿಸಿಕೊಂಡ ಉದಾಹರಣೆಗಳಿವೆ. ಆದರೆ, ರಾಜ್ಯದಲ್ಲಿ ಇತ್ತೀಚೆಗೆ ನಡೆದಿರುವ ಪಿಎಸ್ಐ ನೇಮಕಾತಿ ಹಗರಣವು ಕೇವಲ ಇಲಾಖೆಗೆ ಮಸಿ ಬಳಿದಿರುವುದಿಲ್ಲ. ಕರ್ನಾಟಕ ರಾಜ್ಯಕ್ಕೆ ಮತ್ತು ಕನ್ನಡ ಜನತೆಗೆ ಅಪಖ್ಯಾತಿ ತಂದಿರುತ್ತದೆ. ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ಬರೆದಿದ್ದ ಹಲವಾರು ವಿದ್ಯಾರ್ಥಿಗಳ ಓಎಂಆರ್ ಶೀಟುಗಳು ತಿದ್ದುಪಡಿಯಾಗಿದೆ. ಉತ್ತರಗಳನ್ನು ತಿದ್ದಿರುವುದು ವಿಧಿ-ವಿಜ್ಞಾನ ಪರೀಕ್ಷೆಯಲ್ಲಿ ಸಾಬೀತಾಗಿದೆ. ಪಿಎಸ್ಐ ನ ನೇಮಕಾತಿ ಮುಖ್ಯಸ್ಥರಾಗಿದ್ದ ಎಡಿಜಿಪಿ ಹಾಗೂ ಎಸ್‌ಪಿ ಮತ್ತು ಡಿವೈಎಸ್‌ಪಿ ಗಳನ್ನು ಕಿಂಗ್‌ಪಿನ್‌ಗಳೊಂದಿಗೆ ಬಂಧಿಸಲಾಗಿದೆ. ಇಂತಹ ಮಹತ್ವದ ಸಾರ್ವಜನಿಕ ವಿಷಯವನ್ನು ನಿಯಮ 330 ರ ಅಡಿಯಲ್ಲಿ ಪ್ರಸ್ತಾಪಿಸಲು ಅನುವು ಮಾಡಿಕೊಡಬೇಕೆಂದು ಕೋರುತ್ತೇವೆ.

## ಸರ್ಕಾರದ ಹೇಳಿಕೆ

ಪೊಲೀಸ್ ಸಬ್-ಇನ್ಸ್‌ಪೆಕ್ಟರ್ (ಪಿ.ಎಸ್.ಐ) (ಸಿವಿಲ್) 545 ಹುದ್ದೆಗಳಿಗೆ ದಿನಾಂಕ: 03.10.2021 ರಂದು ರಾಜ್ಯದ 07 ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ. 545 ಪಿಎಸ್‌ಐ ರವರುಗಳ ನೇರ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 21.01.2021 ರಂದು ಅಧಿಸೂಚನೆಯನ್ನು ಹೊರಡಿಸಿ ದಿನಾಂಕ: 03.10.2021 ರಂದು ಲಿಖಿತ ಪರೀಕ್ಷೆಯನ್ನು ನಡೆಸಲಾಗಿತ್ತು. ದಿನಾಂಕ: 19.01.2022 ರಂದು ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ದಿನಾಂಕ: 07.04.2022 ರಂದು ಸದರಿ ಲಿಖಿತ ಪರೀಕ್ಷೆಯಲ್ಲಿ ಅವ್ಯವಹಾರಗಳು ನಡೆದಿರುವ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ತಕ್ಷಣವೇ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಎಸಗಿದ ಅಕ್ರಮಗಳ ಕುರಿತು ಸಿಐಡಿ ತನಿಖೆಗೆ ಆದೇಶಿಸಲಾಗಿರುತ್ತದೆ.

ದಿನಾಂಕ: 08.04.2022 ರಂದು ಸಿಐಡಿಯು ಈ ಬಗ್ಗೆ ವಿಚಾರಣೆಯನ್ನು ಪ್ರಾರಂಭಿಸಿದ್ದು, ಮೇಲ್ನೋಟಕ್ಕೆ ರೋಲ್ ನಂ.9221946ನ್ನು ಹೊಂದಿದ ಅಭ್ಯರ್ಥಿಯು ಓ.ಎಂ.ಆರ್ ಅವ್ಯವಹಾರವನ್ನೆಸಗಿರುವುದು ಕಂಡುಬಂದಿದ್ದರ ಮೇರೆಗೆ ಸಿಐಡಿಯ ವಿಚಾರಣಾಧಿಕಾರಿಯವರು ದಿನಾಂಕ: 09.04.2022 ರಂದು ಕಲಬುರ್ಗಿ ನಗರ ಚೌಕ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮೊಕದ್ದಮೆ ಸಂಖ್ಯೆ: 48/2022, ಕಲಂ 120(ಬಿ), 465, 468, 471, 420 ಮತ್ತು 34 ಐಪಿಸಿ ರಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಕಲಬುರ್ಗಿ ನಗರದಲ್ಲಿ ನಡೆದ ಅವ್ಯವಹಾರಗಳು / ದಾಖಲಾದ ಪ್ರಕರಣಗಳನ್ನು ಗಮನದಲ್ಲಿಟ್ಟುಕೊಂಡು, ಎಲ್ಲಾ ಸಫಲವಾದ ಅಭ್ಯರ್ಥಿಗಳ ಓಎಂಆರ್ ಹಾಳೆಗಳನ್ನು ತಜ್ಞರ ಪರೀಕ್ಷೆಗಾಗಿ ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಹಂತ ಹಂತವಾಗಿ ಕಳುಹಿಸಲಾಗಿತ್ತು. ತಜ್ಞರ ಅಭಿಪ್ರಾಯ ವರದಿಗಳಿಂದ 22 ಸಫಲವಾದ ಅಭ್ಯರ್ಥಿಗಳು ಬೆಂಗಳೂರು ನಗರದಲ್ಲಿ ಅವ್ಯವಹಾರಗಳನ್ನು ನಡೆಸಿರುವುದು ಕಂಡುಬಂದಿರುತ್ತದೆ. ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ: 60/2022, ಕಲಂ 465, 468, 471, 420, 120 (ಬಿ) ರೆ/ವಿ 34 ಐಪಿಸಿ ರಡಿಯಲ್ಲಿ ಪ್ರಕರಣವು ದಾಖಲಾಗಿರುತ್ತದೆ.

ಮೇಲ್ಕಂಡ ಪ್ರಕರಣಗಳ ತನಿಖಾ ಕಾಲದಲ್ಲಿ ಕಲಬುರಗಿ ಹಾಗೂ ಬೆಂಗಳೂರಿನಲ್ಲಿ ಇತರ ಅಭ್ಯರ್ಥಿಗಳು ಸಹಾ ಪರೀಕ್ಷೆಯಲ್ಲಿ ಅಕ್ರಮಗಳನ್ನು ಎಸಗಿದ್ದಾರೆಂಬುದು ಕಂಡು ಬಂದ ಹಿನ್ನೆಲೆಯಲ್ಲಿ ಕಲಬುರಗಿಯಲ್ಲಿ ಬ್ಲೂಟೂತ್ ಬಳಕೆಗೆ ಸಂಬಂಧಿಸಿದಂತೆ 07 ಹೆಚ್ಚುವರಿ ಪ್ರಕರಣಗಳು ಹಾಗೂ ಬೆಂಗಳೂರಿನಲ್ಲಿ ಓ.ಎಂ.ಆರ್ ಶೀಟ್‌ಗಳ ತಿದ್ದುಪಡಿಗೆ ಸಂಬಂಧಿಸಿದಂತೆ 04 ಹೆಚ್ಚುವರಿ ಪ್ರಕರಣಗಳನ್ನು ದಾಖಲಿಸಲಾಗಿರುತ್ತದೆ.

ಒಟ್ಟಾರೆ ಪಿ.ಎಸ್.ಐ ನೇಮಕಾತಿ ಪರೀಕ್ಷೆ-2021 ಕ್ಕೆ ಸಂಬಂಧಿಸಿದಂತೆ ಬ್ಲೂಟೂತ್ ಬಳಕೆ ಹಾಗೂ ಓ.ಎಂ.ಆರ್ ಸೀಟ್‌ಗಳ ತಿದ್ದುಪಡಿಗೆ ಸಂಬಂಧಿಸಿದಂತೆ 13 ಪ್ರಕರಣಗಳು ದಾಖಲಾಗಿ ಸಿಐಡಿ ತನಿಖೆಯು ಪ್ರಗತಿಯಲ್ಲಿರುತ್ತದೆ.

ಈ ಪ್ರಕರಣಗಳಲ್ಲಿ ಪರೀಕ್ಷಾ ಕೇಂದ್ರದಲ್ಲಿ ಓ.ಎಂ.ಆರ್ ಹಾಳೆಗಳ ತಿದ್ದುಪಡಿ, ನೇಮಕಾತಿ ವಿಭಾಗದಲ್ಲಿ ಓ.ಎಂ.ಆರ್ ಹಾಳೆಗಳ ತಿದ್ದುಪಡಿ ಮತ್ತು ಬ್ಲೂಟೂತ್ ಬಳಸಿ ಪರೀಕ್ಷೆ ಬರೆದಿರುವುದು ಈ ಮೂರು ರೀತಿಯ ಅಕ್ರಮಗಳು ನಡೆದಿರುವುದು ಕಂಡು ಬಂದಿರುತ್ತದೆ.

ಪಿಎಸ್ಐ ಲಿಖಿತ ಪರೀಕ್ಷೆಯನ್ನು ಬರೆದಿರುವ ಪ್ರಾಮಾಣಿಕ ಅಭ್ಯರ್ಥಿಗಳಿಗೆ ಅನ್ಯಾಯವಾಗದಂತೆ ಸದರಿ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಿ ಹೊಸದಾಗಿ ಮರುಪರೀಕ್ಷೆ ನಡೆಸಲು ತೀರ್ಮಾನಿಸಿ ಸರ್ಕಾರವು ದಿ: 29-04-2022 ರಂದು ಆದೇಶವನ್ನು ಹೊರಡಿಸಲಾಗಿರುತ್ತದೆ.

ಈ ಪ್ರಕರಣವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈವರೆಗೂ ಈ ಕೆಳಗಿನಂತೆ ಕ್ರಮ ಜರುಗಿಸಲಾಗಿರುತ್ತದೆ.

- ನೇಮಕಾತಿ ವಿಭಾಗದಲ್ಲಿ ಓ.ಎಂ.ಆರ್ ಹಾಳೆಗಳನ್ನು ತಿದ್ದುವಲ್ಲಿ ಪಾತ್ರ ವಹಿಸಿದ್ದ ನೇಮಕಾತಿ ವಿಭಾಗದ ಅಂದಿನ ಎಡಿಜಿಪಿ ಶ್ರೀ ಅಮ್ರಿತ್ ಪಾಲ್ ಹಾಗೂ ಡಿವೈಎಸ್‌ಪಿ ಶ್ರೀ ಶಾಂತಕುಮಾರ್ ಹಾಗೂ ಇತರ ಸಿಬ್ಬಂದಿಗಳನ್ನು ಬಂಧಿಸಲಾಗಿರುತ್ತದೆ.
- 08 ಪ್ರಕರಣಗಳಲ್ಲಿ ಪ್ರಾಥಮಿಕ ದೋಷಾರೋಪಣಾ ಪಟ್ಟಿಗಳನ್ನು ಸಲ್ಲಿಸಲಾಗಿದ್ದು, ತನಿಖೆಯನ್ನು ಮುಂದುವರೆಸಲಾಗಿರುತ್ತದೆ.
- ಒಟ್ಟಾರೆ ಈ ಪ್ರಕರಣದಲ್ಲಿ 95 ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿರುತ್ತದೆ. ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
- ಕಲಬುರಗಿ ಪ್ರಕರಣಗಳ ಆರೋಪಿಗಳಿಗೆ ಸಂಬಂಧಿಸಿದ ವಿವಿಧ ಬ್ಯಾಂಕ್ ಖಾತೆಗಳು ಹಾಗೂ ಮ್ಯೂಚುಯಲ್ ಫಂಡ್‌ಗಳಲ್ಲಿನ ರೂ.08 ಕೋಟಿಗೂ ಅಧಿಕ ಹಣವನ್ನು ಫ್ರೀಜ್ ಮಾಡಲಾಗಿದೆ ಹಾಗೂ 506 ಗ್ರಾಂ (ಸುಮಾರು ರೂ.20.16 ಲಕ್ಷ ಬೆಲೆಯ) ಚಿನ್ನದ ಆಭರಣಗಳನ್ನು ಬ್ಯಾಂಕ್‌ನ ಲಾಕರ್‌ನಿಂದ ವಶಪಡಿಸಿಕೊಳ್ಳಲಾಗಿದೆ.
- ನೇಮಕಾತಿ ವಿಭಾಗದ ಆರೋಪಿತರು ಅಭ್ಯರ್ಥಿಗಳಿಂದ ಸಂಗ್ರಹಿಸಿದ್ದ ರೂ.3.11 ಕೋಟಿಗೂ ಅಧಿಕ ಹಣವನ್ನು ಹಲವಾರು ಸ್ಥಳಗಳಿಂದ ವಶಪಡಿಸಿಕೊಳ್ಳಲಾಗಿದೆ.
- ಪ್ರಕರಣದಲ್ಲಿ ಭಾಗಿಯಾದ ಸರ್ಕಾರಿ ನೌಕರರು ಮತ್ತು ಪೊಲೀಸ್ ಅಧಿಕಾರಿ / ಸಿಬ್ಬಂದಿಗಳ ವಿರುದ್ಧ ಅಧಿಕಾರ ದುರುಪಯೋಗ, ತೀವ್ರತರವಾದ ಕರ್ತವ್ಯಲೋಪ, ಕರ್ತವ್ಯದಲ್ಲಿ ಘೋರ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಆರೋಪಗಳಡಿ ಅಮಾನತ್ತುಪಡಿಸಲಾಗಿದ್ದು, ಸದರಿಯವರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಜರುಗಿಸಲಾಗಿರುತ್ತದೆ.

ಈಗಾಗಲೇ ಪಿ.ಎಸ್.ಐ ನೇಮಕಾತಿ ಪರೀಕ್ಷಾ ಅಕ್ರಮದಲ್ಲಿ ಭಾಗಿಯಾಗಿರುವ ಪೊಲೀಸ್ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಯನ್ನು ಬಂಧಿಸಿದ್ದು, ಪ್ರಸ್ತುತ ಪ್ರಕರಣದಲ್ಲಿ ಸಿಐಡಿ ತನಿಖೆಯು ಪ್ರಗತಿಯಲ್ಲಿದ್ದು, ಅಕ್ರಮದಲ್ಲಿ ಭಾಗಿಯಾಗಿರುವ ಎಲ್ಲಾ ಆರೋಪಿತರುಗಳ ವಿರುದ್ಧ ಸರ್ಕಾರವು ಕಾನೂನು ರೀತ್ಯಾ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಜರುಗಿಸಲಾಗುವುದು.

**ಒಇ 228 ಪಿಇಜಿ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು

## ಅನುಬಂಧ

| ಕ್ರ ಸಂ. | ಬಂಧಿತ ಆರೋಪಿಯ ಹೆಸರು | ಬಂಧನದ ದಿನಾಂಕ | ಷರಾ |
|---|---|---|---|
| 01 | ರಘುವೀರ್ ಹೆಚ್.ಯು | 30.04.2022 | ನ್ಯಾಯಾಂಗ ಬಂಧನ |
| 02 | ಚೇತನ್‌ಕುಮಾರ್ ಎಂ.ಸಿ. | 30.04.2022 | ನ್ಯಾಯಾಂಗ ಬಂಧನ |
| 03 | ವೆಂಕಟೇಶ್‌ಗೌಡ ಬಿ.ಸಿ. | 30.04.2022 | ನ್ಯಾಯಾಂಗ ಬಂಧನ |
| 04 | ಮಮತೇಶ್‌ಗೌಡ | 30.04.2022 | ನ್ಯಾಯಾಂಗ ಬಂಧನ |
| 05 | ಮಧು ಆರ್. | 30.04.2022 | ನ್ಯಾಯಾಂಗ ಬಂಧನ |
| 06 | ಪ್ರವೀಣ್‌ಕುಮಾರ್ ಹೆಚ್.ಆರ್. | 30.04.2022 | ನ್ಯಾಯಾಂಗ ಬಂಧನ |
| 07 | ಸೂರ್ಯನಾರಾಯಣ ಕೆ. | 30.04.2022 | ನ್ಯಾಯಾಂಗ ಬಂಧನ |
| 08 | ನಾಗರಾಜ ಸಿ.ಎಂ. | 30.04.2022 | ನ್ಯಾಯಾಂಗ ಬಂಧನ |
| 09 | ದಿಲೀಪ್‌ಕುಮಾರ್ ಸಿ.ಕೆ. | 30.04.2022 | ನ್ಯಾಯಾಂಗ ಬಂಧನ |
| 10 | ಮನುಕುಮಾರ್ ಜಿ.ಆರ್. | 01.05.2022 | ನ್ಯಾಯಾಂಗ ಬಂಧನ |
| 11 | ಯಶವಂತ್ ದೀಪ್ ಸಿ. | 01.05.2022 | ನ್ಯಾಯಾಂಗ ಬಂಧನ |
| 12 | ಗಜೇಂದ್ರ | 01.05.2022 | ನ್ಯಾಯಾಂಗ ಬಂಧನ |
| 13 | ಸೋಮನಾಥ್ ಮಲ್ಲಿಕಾರ್ಜುನ | 04.05.2022 | ನ್ಯಾಯಾಂಗ ಬಂಧನ |
| 14 | ಯಶವಂತಗೌಡ ಹೆಚ್. | 04.05.2022 | ನ್ಯಾಯಾಂಗ ಬಂಧನ |
| 15 | ನಾಗೇಶಗೌಡ ಸಿ.ಎಸ್. | 05.05.2022 | ನ್ಯಾಯಾಂಗ ಬಂಧನ |
| 16 | ರಾಘವೇಂದ್ರ ಜಿ.ಸಿ. | 05.05.2022 | ನ್ಯಾಯಾಂಗ ಬಂಧನ |
| 17 | ಕೇಶವಮೂರ್ತಿ | 08.05.2022 | ನ್ಯಾಯಾಂಗ ಬಂಧನ |
| 18 | ಸಿ.ಎನ್. ಶಶಿಧರ್ | 08.05.2022 | ನ್ಯಾಯಾಂಗ ಬಂಧನ |
| 19 | ಟಿ.ಸಿ. ಶ್ರೀನಿವಾಸ | 09.05.2022 | ನ್ಯಾಯಾಂಗ ಬಂಧನ |
| 20 | ಕೆ.ಎಸ್. ಲೋಕೇಶಪ್ಪ | 09.05.2022 | ನ್ಯಾಯಾಂಗ ಬಂಧನ |
| 21 | ಶರತ್‌ಕುಮಾರ್ ಆರ್. | 09.05.2022 | ನ್ಯಾಯಾಂಗ ಬಂಧನ |
| 22 | ಶ್ರೀಧರ್ ಹೆಚ್. | 09.05.2022 | ನ್ಯಾಯಾಂಗ ಬಂಧನ |
| 23 | ಡಿ.ಹರ್ಷ | 09.05.2022 | ನ್ಯಾಯಾಂಗ ಬಂಧನ |
| 24 | ಮಂಜುನಾಥ ಆರ್. | 10.05.2022 | ನ್ಯಾಯಾಂಗ ಬಂಧನ |
| 25 | ಶಾಂತಕುಮಾರ | 12.05.2022 | ನ್ಯಾಯಾಂಗ ಬಂಧನ |
| 26 | ಗುರವ ಬಸವರಾಜ | 15.05.2022 | ನ್ಯಾಯಾಂಗ ಬಂಧನ |
| 27 | ನಾರಾಯಣ ಸಿ.ಎಂ. | 15.05.2022 | ನ್ಯಾಯಾಂಗ ಬಂಧನ |
| 28 | ಮಧು ಎಸ್.ವಿ. | 16.05.2022 | ನ್ಯಾಯಾಂಗ ಬಂಧನ |
| 29 | ಹರೀಶ್ ಕೆ. | 13.06.2022 | ನ್ಯಾಯಾಂಗ ಬಂಧನ |
| 30 | ಜಾಗೃತ್ ಎಸ್. | 01.07.2022 | ನ್ಯಾಯಾಂಗ ಬಂಧನ |
| 31 | ಅಮೃತ್ ಪಾಲ್ | 04.07.2022 | ನ್ಯಾಯಾಂಗ ಬಂಧನ |
| 32 | ಶರೀಫ್‌ಸಾಬ್ ಫಕ್ರುಸಾಬ್ ಕಳ್ಳಿಮನಿ | 30.07.2022 | ನ್ಯಾಯಾಂಗ ಬಂಧನ |
| 33 | ಸಿದ್ದಲಿಂಗಪ್ಪ ಪಡಶಾವಗಿ | 31.07.2022 | ನ್ಯಾಯಾಂಗ ಬಂಧನ |
| 34 | ಬೀರಪ್ಪ ಯಲ್ಲಪ್ಪ ಮೇಟಿ | 31.07.2022 | ನ್ಯಾಯಾಂಗ ಬಂಧನ |
| 35 | ಹರೀಶ್ | 01.08.2022 | ನ್ಯಾಯಾಂಗ ಬಂಧನ |
| 36 | ಮನೋಜ್ ಎಸ್. | 01.08.2022 | ನ್ಯಾಯಾಂಗ ಬಂಧನ |
| 37 | ರಚನಾ ಹನಮಂತ್ | 28.08.2022 | ನ್ಯಾಯಾಂಗ ಬಂಧನ |
| 38 | ಮನೋಜ್ ಎ.ಪಿ. | 06.09.2022 | ನ್ಯಾಯಾಂಗ ಬಂಧನ |
| 39 | ಶಿವರಾಜ ಜಿ. | 08.09.2022 | ನ್ಯಾಯಾಂಗ ಬಂಧನ |

| | | | |
|---|---|---|---|
| 40 | ವಿರೇಶ ಹಳ್ಳಿ | 16.04.2022 | ನ್ಯಾಯಾಂಗ ಬಂಧನ |
| 41 | ಸಾವಿತ್ರಿ ಕಾಬಾ | 20.04.2022 | ನ್ಯಾಯಾಂಗ ಬಂಧನ |
| 42 | ಸುಮಾ ಎಂ.ಕಂಬಾಳಿಮಠ | 20.04.2022 | ನ್ಯಾಯಾಂಗ ಬಂಧನ |
| 43 | ಸಿದ್ದಮ್ಮ ಬಿರಾದಾರ | 20.04.2022 | ನ್ಯಾಯಾಂಗ ಬಂಧನ |
| 44 | ನಂದಗಾಂವ್ ಚೇತನ | 20.04.2022 | ನ್ಯಾಯಾಂಗ ಬಂಧನ |
| 45 | ಪ್ರವೀಣ ಕುಮಾರ.ಕೆ | 20.04.2022 | ನ್ಯಾಯಾಂಗ ಬಂಧನ |
| 46 | ಅರುಣಕುಮಾರ | 20.04.2022 | ನ್ಯಾಯಾಂಗ ಬಂಧನ |
| 47 | ರಾಜೇಶ ಹಾಗರಗಿ | 29.04.2022 | ನ್ಯಾಯಾಂಗ ಬಂಧನ |
| 48 | ಹಯ್ಯಾಳಿ ನಿಂಗಣ್ಣಾ ದೇಸಾಯಿ | 29.04.2022 | ನ್ಯಾಯಾಂಗ ಬಂಧನ |
| 49 | ರುದ್ರಗೌಡ | 29.04.2022 | ನ್ಯಾಯಾಂಗ ಬಂಧನ |
| 50 | ಶರಣಬಸಪ್ಪ ಬೋರಗಿ | 29.04.2022 | ನ್ಯಾಯಾಂಗ ಬಂಧನ |
| 51 | ವಿಶಾಲ ಶಿರೂರ | 29.04.2022 | ನ್ಯಾಯಾಂಗ ಬಂಧನ |
| 52 | ಮಹಾಂತೇಶ ಪಾಟೀಲ | 29.04.2022 | ನ್ಯಾಯಾಂಗ ಬಂಧನ |
| 53 | ಮಲ್ಲಿಕಾರ್ಜುನ ಮೇಳಕುಂದಿ | 29.04.2022 | **ಜಾಮೀನಿನ ಮೇಲಿರುತ್ತಾರೆ** |
| 54 | ಎನ್.ವಿ.ಸುನೀಲ | 06.05.2022 | ನ್ಯಾಯಾಂಗ ಬಂಧನ |
| 55 | ಅರ್ಚನಾ ಹೊನಗೇರಿ | 06.05.2022 | ನ್ಯಾಯಾಂಗ ಬಂಧನ |
| 56 | ಸುನಂದಾ @ ಸುನೀತಾ | 06.05.2022 | ನ್ಯಾಯಾಂಗ ಬಂಧನ |
| 57 | ಸುರೇಶ ಕಾಟಗಾಂವ್ | 06.05.2022 | **ಜಾಮೀನಿನ ಮೇಲಿರುತ್ತಾರೆ** |
| 58 | ಕಾಳಿದಾಸ ತಾಂಡಲೆ | 06.05.2022 | |
| 59 | ಸದ್ದಾಂ ಹುಸೇನ | 06.05.2022 | |
| 60 | ರುದ್ರಗೌಡ ಪಾಟೀಲ | 08.05.2022 | ನ್ಯಾಯಾಂಗ ಬಂಧನ |
| 61 | ಕುಮಾರಿ ಹೂವಮ್ಮ @ ಜ್ಯೋತಿ | 09.05.2022 | ನ್ಯಾಯಾಂಗ ಬಂಧನ |
| 62 | ದಿವ್ಯಾ ಹಾಗರಗಿ | 09.05.2022 | ನ್ಯಾಯಾಂಗ ಬಂಧನ |
| 63 | ಶ್ರೀಧರ ಪವಾರ | 09.05.2022 | ನ್ಯಾಯಾಂಗ ಬಂಧನ |
| 64 | ಮಂಜುನಾಥ ಮೇಳಕುಂದಿ | 11.05.2022 | ನ್ಯಾಯಾಂಗ ಬಂಧನ |
| 65 | ಕಾಶಿನಾಥ ಚಿಳ್ಳ | 11.05.2022 | ನ್ಯಾಯಾಂಗ ಬಂಧನ |
| 66 | ಆನಂದ ಮೇತ್ರಿ | 12.05.2022 | ನ್ಯಾಯಾಂಗ ಬಂಧನ |
| 67 | ಮಲ್ಲಿಕಾರ್ಜುನ ಸಾಲಿ | 12.05.2022 | ನ್ಯಾಯಾಂಗ ಬಂಧನ |
| 68 | ವೈಜನಾಥ ರೇವೂರ | 13.05.2022 | ನ್ಯಾಯಾಂಗ ಬಂಧನ |
| 69 | ಶಾಂತಿಬಾಯಿ | 06.06.2022 | ನ್ಯಾಯಾಂಗ ಬಂಧನ |
| 70 | ಬಸ್ಯಾನಾಯ್ಕ | 06.06.2022 | ನ್ಯಾಯಾಂಗ ಬಂಧನ |
| 71 | ಮಹಮ್ಮದ ಅಯೂಬ | 08.06.2022 | ನ್ಯಾಯಾಂಗ ಬಂಧನ |
| 72 | ಅಸ್ಲಂ ಮುಜಾವರ್ | 08.06.2022 | ನ್ಯಾಯಾಂಗ ಬಂಧನ |
| 73 | ವಸಂತರಾಯ ನರಿಬೋಳ | 08.06.2022 | ನ್ಯಾಯಾಂಗ ಬಂಧನ |
| 74 | ವಿಶ್ವನಾಥ ಮಾನೆ | 20.06.2022 | ನ್ಯಾಯಾಂಗ ಬಂಧನ |
| 75 | ಸೈಫನ್‌ಸಾಬ್ | 09.06.2022 | ನ್ಯಾಯಾಂಗ ಬಂಧನ |
| 76 | ಇಸ್ಮಾಯಿಲ್ ಖಾದಿರ | 12.06.2022 | ನ್ಯಾಯಾಂಗ ಬಂಧನ |
| 77 | ಚಂದ್ರಕಾಂತ ಕುಲಕರ್ಣಿ | 04.05.2022 | ನ್ಯಾಯಾಂಗ ಬಂಧನ |
| 78 | ಪ್ರಭು ಇಟಗಾರ | 04.05.2022 | ನ್ಯಾಯಾಂಗ ಬಂಧನ |
| 79 | ಶರಣಪ್ಪ | 04.05.2022 | ನ್ಯಾಯಾಂಗ ಬಂಧನ |
| 80 | ಮಹೇಶ ಹಿರೊಳ್ಳಿ | 08.05.2022 | ನ್ಯಾಯಾಂಗ ಬಂಧನ |
| 81 | ಪ್ರಕಾಶ್ ಕಲ್ಲೂರ | 26.05.2022 | ನ್ಯಾಯಾಂಗ ಬಂಧನ |
| 82 | ಪ್ರಕಾಶ್ ಉಡಗಿ | 01.06.2022 | ನ್ಯಾಯಾಂಗ ಬಂಧನ |

| | | | |
|---|---|---|---|
| 83 | ವಿಜಯ್‌ಕುಮಾರ್ ಪೂಜಾರಿ | 04.08.2022 | ನ್ಯಾಯಾಂಗ ಬಂಧನ |
| 84 | ಕಲ್ಲಪ್ಪ ಸಿದ್ದಪ್ಪ ಅಲ್ಲಾಪುರ | 05.08.2022 | ನ್ಯಾಯಾಂಗ ಬಂಧನ |
| 85 | ರವಿರಾಜ್ ಅಖಂಡೆ | 04.08.2022 | ನ್ಯಾಯಾಂಗ ಬಂಧನ |
| 86 | ಪೀರಪ್ಪ ಸಿದ್ನಾಳ | 04.08.2022 | ನ್ಯಾಯಾಂಗ ಬಂಧನ |
| 87 | ಶ್ರೀಶೈಲ | 04.08.2022 | ನ್ಯಾಯಾಂಗ ಬಂಧನ |
| 88 | ಭಗವತರಾಯ | 08.08.2022 | ನ್ಯಾಯಾಂಗ ಬಂಧನ |
| 89 | ಸಿದ್ದುಗೌಡ ಪಾಟೀಲ್ | 04.08.2022 | ನ್ಯಾಯಾಂಗ ಬಂಧನ |
| 90 | ಸೋಮನಾಥ ಬಿರಾದಾರ್ | 04.08.2022 | ನ್ಯಾಯಾಂಗ ಬಂಧನ |
| 91 | ದರ್ಶನ್‌ಗೌಡ | 05.06.2022 | ನ್ಯಾಯಾಂಗ ಬಂಧನ |
| 92 | ಕುಶಾಲ್ ಕುಮಾರ್ | 08.06.2022 | ನ್ಯಾಯಾಂಗ ಬಂಧನ |
| 93 | ಮೋಹನ್ ಕುಮಾರ್.ಹೆಚ್.ಜಿ | 05.06.2022 | ನ್ಯಾಯಾಂಗ ಬಂಧನ |
| 94 | ದಿಲೀಪ್ ಕುಮಾರ್.ಎನ್. | 06.06.2022 | ನ್ಯಾಯಾಂಗ ಬಂಧನ |
| 95 | ಹರೀಶ್ ಹೆಚ್.ಬಿ | 05.06.2022 | ನ್ಯಾಯಾಂಗ ಬಂಧನ |